ದಸ್ತಾವೇಜಿನ ನಂಬರ್ ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಒರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರೇಷನ್ ಬಗ್ಗೆ ಹಾಜರ್ ಆಡಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
Iನೇ ಬುಕ್ಕು ನಂಬರ್ 19 ——— 1885—86 ತರೀಕೆರೆತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸ್	ತರೀಕೆರೆ ತಾಲ್ಲೂಕು ಕಸಬಾ ಹಾದೀಕೆರೆಯಲ್ಲಿರುವ ಸೈದ್ ಸಾಬರ ಮಗ ಸೈದ್ ಅಬ್ಬಾಸಾಬ್	ತರೀಕೆರೆ ತಾಲ್ಲೂಕು ಕಸಬಾ ಹಾದೀಕೆರೆಯಲ್ಲಿರುವ ಸೈದ್ ಸಾಬರ ಮಗ ಸೈದ್ ಅಬ್ಬಾಸಾಬನ ಹೆಂಡತಿ ಜಹಬಾರಾಬಿ	30ನೇ ಏಪ್ರೆಲ್ 1885ನೇ ಇಸವಿ	30ನೇ ಏಪ್ರೆಲ್ 1885ನೇ ಇಸವಿ	200 ರೂಪಾಯಿಗಳಿಗೆ ಹಾದೀಕೆರೆ ಗ್ರಾಮದ ಸರ್ವೆ ನಂ. 53-5 ಮತ್ತು ಈ ಗ್ರಾಮಕ್ಕೆ ಸೇರಿದ ಮಲ್ಲೇನಹಳ್ಳಿ ಸರ್ವೆ ನಂ. 5ನೇ ಪೈಕೀ ಗದ್ದೇ ಸಹ ಶುದ್ಧ ಕ್ರಯಕ್ಕೆ ಕೊಟ್ಟಿರುವದಾಗಿ.
Iನೇ ಬುಕ್ಕು ನಂಬರ್ 38 ——— 1885—86 ತರೀಕೆರೆತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸ್	ತರೀಕೆರೆ ತಾಲ್ಲೂಕು ಅಜ್ಜಂಪುರದಲ್ಲಿ ಇರುವ ಅಂತರಗಟ್ಟೆ ನಾಡಿಗ ಲಿಂಗಪ್ಪನವರ ಮಗ ಶಂಕರಪ್ಪ ಯಾನೆ ಪುಟ್ಟರಾಮಯ್ಯ	ಕಡೂರು ತಾಲ್ಲೂಕು ಚಿಕ್ಕ ನಲ್ಲೂರಲ್ಲಿರುವ ಕೃಷ್ಣಪ್ಪನವರ ಮಗ ನಂಜಪ್ಪ	23ನೇ ಮೇ 1885ನೇ ಇಸವಿ	23ನೇ ಮೇ 1885ನೇ ಇಸವಿ	200 ರೂಪಾಯಿಗಳಿಗೆ ತರೀಕೆರೆ ತಾಲ್ಲೂಕು ಬುಕ್ಕಾಂಬುದಿ ಗ್ರಾಮದಲ್ಲಿರುವ 31ನೇ ನಂ. ಹಂಚಿನ ಮನೆ ಇದಕ್ಕೆ ಸೇರಿದ ಹಿತ್ತಲು ಅಂಗಳ ಸಹ ಮತ್ತು ಕಡೂರು ತಾಲ್ಲೂಕು ಚಿಕ್ಕನಲ್ಲೂರು ಕಸಬಾಗ್ರಾಮದಲ್ಲಿರುವ ನಂ. 81—82ನೇ ಹಂಚಿನ ಮನೆ ಇದಕ್ಕೆ ಸೇರಿದ ನಿವೇಶನ ಸಹ ಮತ್ತು ಯಿದೇ ಗ್ರಾಮದ ಬಗರ್ ನಂಬರ್ ಹುಲ್ಲಿನ ಮನೆ ಈ ಮೂರು ಸೊತ್ತುಗಳನ್ನು ಕ್ರಯಕ್ಕೆ ಕೊಟ್ಟಿರುವದಾಗಿ ವಗೈರೆ.

ಜೆ. ಯಿ. ಕ್ಯಾಂಪ್‌ಬೆಲ್ ಕರ್ನಲ್,
ಅ॥ ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಸ॥ 1887ನೇ ಇಸವಿ ಏಪ್ರೆಲ್ ತಿಂಗಳ ಕಾಲಸ್ಥಿತಿ ರಿಪೋರ್ಟು.

ಮಳೆ.—ಈ ತಿಂಗಳಲ್ಲಿ ತಾಲ್ಲೂಕಾ ಮುಳೆ-ಮಳೆ ಬಿದ್ದಿರುತ್ತೆ; ರಿಜಿಸ್ಟರಾದ ಪರಿಮಾಣವು ಯಿದರಡೀ ಕಾಣಿಸಿರುತ್ತೆ:—

ಮೈಸೂರು	...	1 87	ನಂಜನಗೂಡು	..	1 7
ಚಾಮರಾಜನಗರ	..	0 20	ತಿರುಮಕೂಡ್ಲು ನರಸೀಪುರ	..	0 64
ಶ್ರೀರಂಗಪಟ್ಟಣ	..	0 75	ಮುಂಡ್ಯ	..	0 60
ಹುಣಸೂರು	..	1 30	ಮಳವಳ್ಳಿ	..	0 45
ಯಡತೊರೆ	..	1 21	ಅತ್ತಿಕುಪ್ಪ	..	1 5
ಹೆಗ್ಗಡದೇವನಕೋಟೆ	..	2 90	ನಾಗಮಂಗಲ	..	1 85
ಗುಂಡ್ಲುಪೇಟೆ	..	2 93			

ಜನಾರೋಗ್ಯ.—ಸಾಧಾರಣವಾಗಿತ್ತು. ಜ್ವರ ಕೆಲವು ಪ್ರದೇಶಗಳಲ್ಲಿ ವ್ಯಾಪಿತ್ತು.

ಕಾಲ್ನಡೆ.—ಕಾಡುಮೃಗಗಳಿಂದ ಕೊಲ್ಲಲ್ಪಟ್ಟ 51 ಕಾಲ್ನಡೆಗಳೂ ಸೇರಿ 1,059 ಕಾಲ್ನಡೆಗಳು ಮೃತಪಟ್ಟವು.

ಧಾರಣೆ.—ಧಾರಣೆಗಳು ಪ್ರಾಯಶಃ ಯೇಕರೀತಿಯಲ್ಲಿದ್ದವು, ಅವ್ವಲ್ ರಖಂ ಅಕ್ಕಿ ರೂಪಾಯಿ 1ಕ್ಕೆ 11½ ಸೇರು, ದುಯಂ ರಖಂ 13½ ಸೇರು, ರಾಗಿ 40 ಸೇರು, ಮತ್ತು ಪುರಳಿ 32 ಸೇರು ಮಾರಲ್ಪಟ್ಟವು.

ಟಿ. ಆನಂದರಾವ್,
ಡೆಪ್ಯೂಟಿ ಕಮ್ಮಿಷನರ್.